# ನೆಲನೋಟ

ಎಸ್ ಗಿರಿಧರ್

ಆಜೀಮ್ ಪ್ರೇಮ್‌ಜಿ ಫೌಂಡೇಶನ್ ಜೊತೆಗಿನ ನನ್ನ ಕೆಲಸಕಾರ್ಯಗಳಿಗೆ ಸಂಬಂಧಿಸಿದಂತೆ, ಪ್ರತಿಷ್ಠಾನವು ಕಾರ್ಯನಿರ್ವಹಿಸುತ್ತಿರುವ ಬಹುತೇಕ ಎಲ್ಲಾ ಕ್ಷೇತ್ರಗಳ ಸರ್ಕಾರೀ ಶಾಲೆಗಳಿಗೂ ನಾನು ಭೇಟಿ ನೀಡಿದ್ದೇನೆ-ಅದು ಬಾಣಸಕಾಂಟದಲ್ಲಿರುವ ದೀಸಾ ಇರಬಹುದು, ಉತ್ತರ ಕಾಶಿಯ ಮೋರಿ ಇರಬಹುದು ಅಥವಾ ಸಿರೋಹಿಯ ಪಿಂಡ್ವಾರಾ ಇರಬಹುದು. ಹಾಗಾಗಿ, ಲರ್ನಿಂಗ್ ಕರ್ವ್‌ನ ಸಂಪಾದಕರು ಸಾರ್ವಜನಿಕ ಶಿಕ್ಷಣದ ಮೇಲಿನ ವಿಶೇಷ ಸಂಚಿಕೆಗೆ ಲೇಖನವೊಂದನ್ನು ಬರೆದುಕೊಡಿ ಎಂದು ಕೇಳಿದಾಗ, ಸಂಪಾದಕರ ಸೂಚನೆಯನ್ನು ಪಾಲಿಸುವ ಅತ್ಯುತ್ತಮ ಮಾರ್ಗವೆಂದರೆ, ಸ್ಥಳದಲ್ಲಿ ನಾನು ನೋಡಿದ್ದನ್ನು ನೆನಪಿಸಿಕೊಂಡು ಬರೆಯುವುದು ಎಂದು ಆಲೋಚಿಸಿದೆ. ಆದರೆ, ಇದೊಂದು ಅಚ್ಚುಕಟ್ಟಾದ, ಕ್ರಮಬದ್ಧವಾದ ನಿರೂಪಣೆಯಲ್ಲದಿದ್ದರೂ ಶಾಲೆಗಳಿಗೆ ನೀಡಿದ ಭೇಟಿಯ ನೆನಪುಗಳಲ್ಲಿ ಮುಳುಗೆದ್ದು ಬಂದೆ ಎನ್ನುವುದನ್ನು ನಾನು ಒಪ್ಪಿಕೊಳ್ಳಲೇಬೇಕು. ಜೊತೆಗೇ ಸನ್ನಿವೇಶದಿಂದ ಸನ್ನಿವೇಶಕ್ಕೆ ಸಾಗಿದಂತೆ, ಒಂದು ತರಹದಲ್ಲಿ ಅರ್ಥಪೂರ್ಣವಾದ ನಿರೂಪಣೆಯನ್ನೇ ಮಾಡುತ್ತಿದ್ದೇನೆ ಎಂದೆನಿಸುತ್ತಿದೆ.

ಈಶಾನ್ಯ ಕರ್ನಾಟಕದಲ್ಲಿರುವ ಹನಕನಹಳ್ಳಿ ಎಂಬ ಪುಟ್ಟಹಳ್ಳಿಯಲ್ಲಿ ಶಾಲೆಯ ಶಿಕ್ಷಕರಾಗುವುದೆಂದರೆ ಏನು ಅರ್ಥ? ಹೂವಿನಹಡಗಲಿ (ಹಡಗಲ್ಲಿ ಸಾಗಿಸುವ ಹೂವು ಎಂಬುದು ಅದರ ಆಕರ್ಷಕವಾದ ಅರ್ಥ) ತಾಲೂಕಿನ ಚಿಕ್ಕ ಪಟ್ಟಣವೊಂದರಿಂದ ಕೂಡ ಅದೆಷ್ಟೋ ಮೈಲಿ ದೂರದಲ್ಲಿರುವ ಹಳ್ಳಿಯ ಸರ್ಕಾರೀ ಶಾಲೆಯಲ್ಲಿ 54 ವಿದ್ಯಾರ್ಥಿಗಳಿದ್ದಾರೆ. ಅದರಲ್ಲಿ ಹಲವರು ಮೊದಲನೆಯ ಪೀಳಿಗೆಯ ವಿದ್ಯಾರ್ಥಿಗಳು. ಅವರ ತಂದೆ ತಾಯಿಯರು ಹಳ್ಳಿಯ ಸುತ್ತಮುತ್ತಲಿನ ಕೃಷಿ ಭೂಮಿಗಳಲ್ಲಿ ದಿನಗೂಲಿ ಕಾರ್ಮಿಕರಾಗಿ ಕೆಲಸ ಮಾಡುವವರು. ಶಾಲೆಯಲ್ಲಿ ಇಬ್ಬರು ಶಿಕ್ಷಕರಿದ್ದಾರೆ. ಅದರಲ್ಲೊಬ್ಬರು ಮುಖ್ಯೋಪಾಧ್ಯಾಯರಾಗಿಯೂ ಕಾರ್ಯನಿರ್ವಹಿಸುತ್ತಾರೆ. ಇಷ್ಟು ದೂರದ ಈ ಭಾಗದಲ್ಲಿ ಅವರು ಅತ್ಯಂತ ಸ್ವಾಯತ್ತ ಶಿಕ್ಷಕರು ಎಂದೇ ಹೇಳಬೇಕು. ಹಳ್ಳಿಗೆ ಹತ್ತಿರದಲ್ಲಿ ಆಗೊಮ್ಮೆ ಈಗೊಮ್ಮೆ ಬಸ್ಸೊಂದು ಹಾದು ಹೋಗುತ್ತದೆ. ಕ್ಲಸ್ಟರ್ (ಸಮೂಹ) ಸಂಪನ್ಮೂಲ ವ್ಯಕ್ತಿಗೂ ಅವರ ಅಸ್ತಿತ್ವಕ್ಕೂ ಸಂಬಂಧವೇ ಇಲ್ಲದ ಹಾಗೆ ಅವರು ಬಂದರೂ ಬಂದರೇ ಇಲ್ಲದಿದ್ದರೆ ಇಲ್ಲ. ಪ್ರಾಮುಖ್ಯತೆಯೇ ಇಲ್ಲ. ಕ್ಷೇತ್ರ ಶಿಕ್ಷಣಾಧಿಕಾರಿ (ಬ್ಲಾಕ್ ಎಜುಕೇಷನ್ ಆಫೀಸರ್) ಗಂತೂ ಮೂರು ವರ್ಷಕ್ಕೊಮ್ಮೆ ಇಲ್ಲಿಗೆ ಬರುವುದೂ ಅಸಾಧ್ಯದ ಸಂಗತಿಯೇ. ಆದರೆ ಅಲ್ಲಿ ಆ ಇಬ್ಬರು ಶಿಕ್ಷಕರು ಪ್ರತಿನಿತ್ಯ ಇದ್ದೇ ಇರುತ್ತಾರೆ. ಮಕ್ಕಳು ಬೇಗ ಬರುತ್ತಾರೆ. ಶಾಲೆ ಚಿಕ್ಕದು. ಆದರೆ ಅಚ್ಚುಕಟ್ಟಾಗಿದೆ. ವೇಳಾಪಟ್ಟಿಯನ್ನು ಅವರೇ ನಿರ್ಧರಿಸುವುದು. ಜಿಲ್ಲೆಯ ಆಡಳಿತವು ಅವರಿಗೆ- 40 ನಿಮಿಷ ಕನ್ನಡ, ನಂತರ 40 ನಿಮಿಷ ಗಣಿತ, ನಂತರ 40 ನಿಮಿಷ ಈ ವಿಷಯ ಮತ್ತೆ 40 ನಿಮಿಷ

ಆವಿಷಯ-ಎಂದು ವೇಳಾಪಟ್ಟಿಯನ್ನು ಕೊಟ್ಟಿದೆ. ಆದರೆ, ಈ ಇಬ್ಬರು ಶಿಕ್ಷಕರಿಗೆ ತಾವೇನು ಮಾಡುತ್ತಿದ್ದೇವೆ ಎನ್ನುವುದು ಗೊತ್ತು ಮತ್ತದಕ್ಕೆ ಒಂದು ಲಯವಿದೆ. ಅವರು ಇಡೀ ದಿನವೊಂದನ್ನು ಯೋಜಿಸಿ, ಕಾರ್ಯಗತಗೊಳಿಸಬೇಕು. ಆದ್ದರಿಂದ ಎರಡು ತಾಸು ಕನ್ನಡ ಮಾಡಿಬಿಡುತ್ತಾರೆ. ಏಕೆಂದರೆ, ಒಬ್ಬ ರಾಜ ಹಾಗೂ ಅವನ ದರ್ಬಾರನ್ನು ಕುರಿತಂತೆ ಅವರೊಂದು ನಾಟಕವನ್ನು ಮಾಡುತ್ತಿದ್ದಾರೆ. ರಾಜನ ಪಾತ್ರವನ್ನು ಮಾಡುವವಳು ಒಬ್ಬಳು ಹುಡುಗಿ. ಊರಿನ ಪ್ರತೀ ಮಕ್ಕಳೂ ಶಾಲೆಯಲ್ಲಿದ್ದಾರೆ, ಎಲ್ಲ ಮಕ್ಕಳೂ ಕಲಿಯುತ್ತಿದ್ದಾರೆ. ಶಿಕ್ಷಕರು ಸರಳರು, ಸಾದಾವ್ಯಕ್ತಿಗಳು. ತಮ್ಮ ವಿದ್ಯಾರ್ಥಿಗಳು ನವೋದಯ ಶಾಲೆಯ ಪ್ರವೇಶ ಪರೀಕ್ಷೆಯನ್ನು ಬರೆದು ತೇರ್ಗಡೆಯಾಗುತ್ತಾರೆ ಎನ್ನುವುದು ಅವರಿಗೆ ಸಂತಸದ ಸಂಗತಿ.

ಉರು ಹೊಡೆದುದನ್ನಲ್ಲ, ಬದಲಿಗೆ ವಿಷಯ ಪರಿಕಲ್ಪನೆಗಳನ್ನು ವಿದ್ಯಾರ್ಥಿಗಳು ಹೇಗೆ ಅರ್ಥಮಾಡಿಕೊಂಡಿದ್ದಾರೆ ಎಂಬುದನ್ನು ಪರೀಕ್ಷಿಸುವಂತಹ ಆಸಕ್ತಿಕರ ಪ್ರಶ್ನೆಪತ್ರಿಕೆಗಳನ್ನು ತಯಾರಿಸುವುದು ಹೇಗೆ ಎಂಬುದನ್ನು ಶಿಕ್ಷಕರಿಗೆ ಪರಿಚಯಿಸಲು ಗುಜರಾತಿನ ಬಾಣಸಕಾಂಟದಲ್ಲಿ ಹಲವಾರು ಕಾರ್ಯಾಗಾರಗಳನ್ನು ಆಯೋಜಿಸಲಾಯಿತು. ಆದರೆ, ಈ ಕಾರ್ಯಾಗಾರಗಳು ನಡೆಯುತ್ತಿದ್ದ ಇಡೀ ವಾರವೂ ಎಡೆಬಿಡದೆ ಮಳೆಯಾಗುತ್ತಲೇ ಇತ್ತು. ಹೆಚ್ಚಿನ ಪ್ರದೇಶಗಳಲ್ಲಿ ನೀರು ತುಂಬಿದೆ. ಕಾರ್ಯಾಗಾರಗಳು ನಡೆಯಬೇಕಿದ್ದ ಧರ್ಮಶಾಲೆಯ ಸುತ್ತ ಸೊಂಟದೆತ್ತರ ನೀರು ತುಂಬಿಕೊಂಡಿದೆ. ಅದು ಹೇಗೋ ಕಾರ್ಯಾಗಾರವು ನಡೆಯಬೇಕಿದ್ದ ಹಿಂದಿನ ದಿನ ರಾತ್ರಿಯೇ ಬಂದಿಳಿದ 'ಮುಖ್ಯತರಬೇತುದಾರರು' ಇದೇ ರೀತಿ ಮಳೆಯಾಗುತ್ತಿದ್ದರೆ, ನಾಳೆ ಯಾರಾದರೂ ಶಿಕ್ಷಕರು ಬರುವರೇ ಎಂದು ಚಿಂತೆಗೀಡಾಗಿದ್ದಾರೆ. ಆದರೆ, ಮರುದಿನ ಬೆಳಿಗ್ಗೆ ಒಂಬತ್ತು ಗಂಟೆಗೆ, ಬಾಣಸಕಾಂಟದ 120 ಶಿಕ್ಷಕರು ಆಗಮಿಸಿಯೇಬಿಟ್ಟರು. ಮೊಣಕಾಲಿಗಿಂತಲೂ ಮೇಲಿನ ತನಕ ಬಟ್ಟೆಯನ್ನು ಮಡಚಿಕೊಂಡ ಗಂಡಸರು ಹಾಗೂ ಸಾಧ್ಯವಾದಷ್ಟೂ ಮೇಲಕ್ಕೆ ಸೀರೆಯನ್ನು ಎತ್ತಿಹಿಡಿದುಕೊಂಡ ಹೆಂಗಸರು ನೀರು ಮತ್ತು ಕೆಸರಿನ ನಡುವೆಯೇ ದಾರಿ ಮಾಡಿಕೊಂಡುಬರುತ್ತಿದ್ದರು, ಕಾರ್ಯಕ್ರಮ ಆರಂಭವಾಗಿಯೇಬಿಟ್ಟಿತು. ಅವರು ಬರದೇ ಹೋಗಿದ್ದರೆ ಯಾರಾದರೂ ಏನಾದರೂ ಹೇಳುತ್ತಿದ್ದರೇ? ಇಲ್ಲ, ಆದರೆ ಅವರು ಬಂದರು. ಮುಂದಿನ ಮೂರು ದಿನಗಳ ಕಾಲ, ಈ ತರಹದ ಮೌಲ್ಯಮಾಪನ ಅಂದರೆ ಏನು ಎನ್ನುವುದರ ಕುರಿತು ಪರಿಶೀಲಿಸಿ, ತಿಳಿದುಕೊಂಡರು, ವಾದಿಸಿದರು, ವಿರೋಧಿಸಿದರು. ನಂತರ, ತಾವು ಇಲ್ಲಿ ಏನನ್ನು ಕಲಿಯಲು ಸಾಧ್ಯವಾಯಿತೋ ಅದನ್ನು ತಮ್ಮ ಶಾಲೆ, ತಮ್ಮ ಮಕ್ಕಳು, ತಮ್ಮಸೀಮಿತ ಸಂಪನ್ಮೂಲಗಳೊಂದಿಗೆ ಪ್ರಯೋಗಿಸಿ ನೋಡಲು ದೀಸಾ, ಕಾಂಕ್ರೇಜ್ ಮತ್ತು ಖೇಡಬ್ರಹ್ಮದಲ್ಲಿನ ತಮ್ಮತಮ್ಮ ಶಾಲೆಗಳಿಗೆ ಮರಳಿ ಹೋದರು. ಅವರೆಲ್ಲ ನಮ್ಮ ನಿಮ್ಮಂತೆ ಸಾಮಾನ್ಯ ವ್ಯಕ್ತಿಗಳು. ಆದರೆ, ತಮ್ಮ ಗುಣ-ಸ್ವಭಾವ-ಯೋಗ್ಯತೆಯನ್ನು ತೋರಿಸಿದ್ದರು.

ಬಳ್ಳಾರಿ ಜಿಲ್ಲೆಗೆ ಹಿಂದಿರುಗಿ ಬಂದರೆ, ಕೇವಲ 400 ಮೀ. ಗಳಷ್ಟು ಅಂತರದಲ್ಲಿರುವ ಎರಡು ಶಾಲೆಗಳು ಸಾಕಷ್ಟು ದೊಡ್ಡದಾದ ಒಂದೇ ಹಳ್ಳಿಯ ಮಕ್ಕಳ ಅಗತ್ಯವನ್ನು ಪೂರೈಸುತ್ತಿವೆ (ಶಾಲೆಗಳನ್ನು ಹೀಗೇಕೆ ಕಟ್ಟಲಾಗಿದೆ ಎಂದು ನನ್ನನ್ನು ಕೇಳಬೇಡಿ). ಒಂದು

ಶಾಲೆಯು ಕೊಳಕು, ಅವ್ಯವಸ್ಥೆಯಿಂದ ಕೂಡಿತ್ತು, ಒಪ್ಪ ಓರಣವಿಲ್ಲ. ಮುಖ್ಯೋಪಾಧ್ಯಾಯರಿಗೆ ಆಸಕ್ತಿಯೂ ಇಲ್ಲ. ಅವರು ಪ್ರತಿದಿನ ಬೆಳಿಗ್ಗೆ ತನ್ನ ಶಾಲೆಯ ಪಾಗಾರದ 10 X 6 ಅಡಿ ಗೋಡೆಯ ಪಕ್ಕದಲ್ಲಿಯೇ ಮೋಟಾರು ಬೈಕನ್ನು ನಿಲ್ಲಿಸುತ್ತಾರಾದರೂ ಅದರ ಮೇಲೆ ಬರೆದ ಸಾರ್ವತ್ರಿಕ ಶಿಕ್ಷಣದ ಮಂತ್ರವನ್ನು ಓದಿಲ್ಲ. ಮತ್ತೊಂದು ಶಾಲೆಯ ಕ್ಷೇತ್ರ ವಿಸ್ತಾರವು ಈ ಶಾಲೆಯ ಅರ್ಧದಷ್ಟೇ ಇದ್ದರೂ ಅದರಲ್ಲಿ ಎರಡು ಕೊಠಡಿಗಳಿವೆ, ಕಳೆಕಳೆಯಾಗಿದೆ, ಚಟುವಟಿಕೆಗಳಿಂದ ಕೂಡಿದೆ, ಅಭಿವೃದ್ಧಿಹೊಂದುತ್ತಿದೆ. ಮುಖ್ಯೋಪಾಧ್ಯಾಯರು ಮತ್ತು ಅವರ ಸಹೋದ್ಯೋಗಿ ಗದ್ದಲ ಮಾಡುತ್ತಿರುವ ಕುತೂಹಲಭರಿತ ಮಕ್ಕಳ ಗುಂಪನ್ನು ನಿಭಾಯಿಸುತ್ತಿದ್ದಾರೆ. ಒಂದು ಶಾಲೆಯು ಶೈಕ್ಷಣಿಕ ವರ್ಷದ ಆರಂಭದಲ್ಲಿಯೇ ಸಮಯಕ್ಕೆ ಸರಿಯಾಗಿ ಮಕ್ಕಳ ಸಮವಸ್ತ್ರ ಮತ್ತು ಪಠ್ಯಪುಸ್ತಕಗಳನ್ನು ಪಡೆದುಕೊಂಡಿತು. ಮತ್ತೊಂದು ಶಾಲೆಗೆ ಇವುಗಳ ಬಗ್ಗೆ ಏನೊಂದೂ ಗೊತ್ತಿರಲೇಇಲ್ಲ. ಅದೇಹಳ್ಳಿ, ಅದೇ ಸಮೂಹ (ಕ್ಲಸ್ಟರ್) ಅದೇ ಕ್ಷೇತ್ರ(ಬ್ಲಾಕ್). ಆದರೆ ಅಸಂಭಾವ್ಯ ಎನ್ನಬಹುದಾದ ಚಿತ್ರಣ. ಕೇವಲ 400 ಮೀ. ಅಂತರದಲ್ಲಿ ಎರಡು ಸಂಪೂರ್ಣವಾಗಿ ಭಿನ್ನವೇ ಆದ ಪ್ರಪಂಚಗಳು. ಲಿಂಗಪ್ಪ ಮತ್ತು ಹನುಮಂತಪ್ಪನ ಶಾಲೆಯ 50 ಮಕ್ಕಳದು ಎಂತಹ ಅದೃಷ್ಟ. ಅದೇ ಮತ್ತೊಂದು ಶಾಲೆಯ 120 ಮಕ್ಕಳದು ಘೋರ ನರಕ.

ಕೆಲವು ವರ್ಷಗಳ ಹಿಂದೆ, ಮತ್ತೊಂದು ಜಾಗಕ್ಕೆ ನೀಡಿದ ಭೇಟಿಯಿಂದ ಆದ ಅನುಭವ; ಮೊದಲು ಹೇಳಿದ ಕತೆಯೇ ಆದರೂ ಮತ್ತೆ ಇಲ್ಲಿ ಹೇಳಲು ಸಂತೋಷವಾಗುತ್ತಿದೆ. ಊಳಿಗಮಾನ್ಯ ನಿಬಂಧನೆಗಳು ಇನ್ನೂ ಬಹುಮಟ್ಟಿಗೆ ಜೀವನ ಪದ್ಧತಿಯೇ ಆಗಿರುವ ದೂರದ ಸಿರೋಹಿಯಲ್ಲಿ, ಶಿಕ್ಷಕಿಯರ ತಂಡವೊಂದು ಪ್ರತೀ ತಿಂಗಳು ಒಂದು ಭಾನುವಾರ, ಕುಟುಂಬದ ವಿರೋಧವಿದ್ದರೂ ಶಿಕ್ಷಕರ ಸ್ವಯಂಸೇವಾ ವೇದಿಕೆಗಳಲ್ಲಿ ಭಾಗವಹಿಸುತ್ತದೆ. ಸ್ವಇಚ್ಛೆಯಿಂದ ಬರುವ ಅವರು ಅಲ್ಲಿಗೆ ಬಂದು ಹೋಗುವುದಕ್ಕೂ ತಮ್ಮದೇ ಹಣವನ್ನು ವೆಚ್ಚ ಮಾಡುತ್ತಾರೆ. ಕಲಿಯುವ ಮತ್ತು ತಮ್ಮ ವೃತ್ತಿಯಲ್ಲಿ ಬೆಳೆಯುವ ಆಸಕ್ತಿಯನ್ನು ಹೊಂದಿದ್ದಾರೆ. ಮಹಿಳೆಯರಿಗೆ ಎಷ್ಟೊಂದು ಅಮೂಲ್ಯವಾಗಿರುವ ಭಾನುವಾರದ ರಜೆಯನ್ನೂ ಅವರು ಇದಕ್ಕಾಗಿ ವ್ಯಯಿಸಲು ಸಿದ್ಧರಾಗಿದ್ದಾರೆಂದರೆ ಇದನ್ನು ಸಂಪೂರ್ಣ ಅರ್ಥ ಮಾಡಿಕೊಳ್ಳುವುದೂ ಕಷ್ಟವೇ. ಸ್ವಪ್ರೇರಿತರಾದ, ಮುಖದಲ್ಲಿ ಆಸಕ್ತಿ, ಧೈರ್ಯ ಪ್ರಾಮಾಣಿಕತೆಗಳ ಹೊಳಪನ್ನು ಹೊಂದಿರುವ ಈ ಮಹಿಳೆಯರು ದೀಪ ಹಿಡಿದು ಬೆಳಕು ತೋರಿಸುತ್ತ ಸಾಗುವ ಅಜ್ಞಾತರು. ಅವರನ್ನು ಯಾರೂ ಹಾಡಿ ಹೊಗಳಿದ್ದಿಲ್ಲ. ಗ್ರಾಮೀಣ ಭಾಗದ ಈ ಸರ್ಕಾರೀ ಶಾಲೆಯ ಶಿಕ್ಷಕಿಯರ ಜೊತೆಗಿನ ನನ್ನ ಮಾತುಕತೆಯಲ್ಲಿ ನನಗೆ ಮತ್ತೆ ನೆನಪಿರುವುದು? ಖಂಡಿತವಾಗಿಯೂ ಅವರಲ್ಲೊಬ್ಬಳು ಶಿಕ್ಷಕಿಯ ಹೃದಯಸ್ಪರ್ಶಿ ಮಾತುಗಳು; “ಇವೆಲ್ಲವೂ ವ್ಯವಸ್ಥೆಯಿಂದ ಗುರುತಿಸಲ್ಪಡುವುದಿಲ್ಲ ಎನ್ನುವುದು ನನಗೆ ತಿಳಿದಿದೆ. ಆದರೆ, ಕ್ಷೇತ್ರ ಕಚೇರಿಯಿಂದ (ಬ್ಲಾಕ್ ಆಫೀಸ್) ಯಾರಾದರೂ ಒಬ್ಬರು, ‘ಒಳ್ಳೆಯ ಕೆಲಸ ಮಾಡಿದ್ದೀರಿ’ ಎಂದು ಒಂದು ಸಂದೇಶ (ಎಸ್ಸೆಮೆಸ್) ಕಳುಹಿಸಿದರೂ ಸಾಕು, ನನ್ನ ಜೀವಮಾನದುದ್ದಕ್ಕೂ ಸಂತೋಷವಾಗಿರುತ್ತೇನೆ.”

ಸರ್ಕಾರೀ ಶಾಲಾ ಶಿಕ್ಷಕರಿಗೆ ಪಠ್ಯಪುಸ್ತಕಗಳ ಪೂರಕವರ್ಧನೆಗಾಗಿ ಕಲಿಕೆ, ಭೋದನೆಯ ಸಾಮಗ್ರಿಗಳನ್ನು ಸಿದ್ಧಪಡಿಸಲು ಪ್ರತೀ ವರ್ಷ 500 ರೂಪಾಯಿಗಳನ್ನು ಕೊಡುತ್ತಿದ್ದು ನಿಮಗೆ ನೆನಪಿದೆಯೇ? ನನಗೆ ಇದು ಸರಿಯಾಗಿ ನೆನಪಿದೆ. ಮೊದಮೊದಲು ಶಾಲೆಗಳಿಗೆ ಭೇಟಿ ನೀಡುತ್ತಿದ್ದಾಗ ಈ ಮೊತ್ತವು ಕೇವಲ ಸ್ಥಳೀಯ ಮಾರುಕಟ್ಟೆಗಳಲ್ಲಿ ಥರ್ಮೋಕೋಲ್‌ನ ಮಾರಾಟವನ್ನು ಹೆಚ್ಚಿಸುತ್ತದೆ ಅಷ್ಟೇ ಎಂದು ಸಂವೇದನೆಗಳೇ ಇಲ್ಲದವನಂತೆ ಹೇಳುತ್ತಿದ್ದೆ. ಏಕೆಂದರೆ, ಬಹಳಷ್ಟು ಶಿಕ್ಷಕರು ಅದನ್ನು ಬೇರೆ ಬೇರೆ ಆಕಾರದಲ್ಲಿ ಕತ್ತರಿಸಿ, ಬಣ್ಣ ಹಚ್ಚುವುದರಿಂದ ಅವು ತರಗತಿಯಲ್ಲಿ ಪಾಠ ಮಾಡಲು ತಮಗೆ ನೆರವಾಗಬಲ್ಲವು ಎಂದು ತಿಳಿದಿದ್ದರು. ಅದೇ ಜಾಗಗಳಲ್ಲಿ ಇಷ್ಟು ವರ್ಷಗಳ ನಂತರ ನಾನೊಂದು ಸಹಜ ಸತ್ಯವನ್ನು ಅರಿತುಕೊಂಡೆ- ಶಿಕ್ಷಕರು ಕಲಿಯಲು ಇಷ್ಟಪಡುತ್ತಾರೆ, ಸುಧಾರಣೆಗಳನ್ನು ಮಾಡಿಕೊಳ್ಳಲು ಬಯಸುತ್ತಾರೆ. ಆದ್ದರಿಂದ ಅದೇ ಹಳ್ಳಿ ಶಾಲೆಗಳಲ್ಲಿ ಕೆಲವು ಸಂಪನ್ಮೂಲ ವ್ಯಕ್ತಿಗಳು ಈ ಶಿಕ್ಷಕರಿಗೆ ಗಣಿತ ಅಥವಾ ಇತಿಹಾಸವನ್ನು ಕಲಿಸಲು ಉಪಯುಕ್ತವಾದಂತಹ ಸಾಮಗ್ರಿಗಳನ್ನು ತಾವೇ ತಯಾರಿಸಿಕೊಳ್ಳಬಹುದಾದ ಮಾರ್ಗಗಳನ್ನು ತೋರಿಸಿದಾಗ ಅವರು ತಮ್ಮನ್ನೇ ತಾವು ಮೀರಿಸಿಬಿಟ್ಟರು. ಮಂದಿರ ಹಾಗೂ ಕೋಟೆಗಳನ್ನು ತೋರಿಸಲು ಥರ್ಮೋಕೋಲ್‌ನ್ನು ಕತ್ತರಿಸಿ ಬಳಸಿದ್ದ ಯಾದಗೀರ್ ಜಿಲ್ಲೆಯ ಸುರಪುರ ತಾಲೂಕಿನ ಶಿಕ್ಷಕರೇ ಈಗ ಮಕ್ಕಳ ಜೊತೆಗೂಡಿ ತಮ್ಮ ಹಳ್ಳಿಗಳ ಇತಿಹಾಸವನ್ನು ವರ್ಣಿಸುವ (ಶ್ಮಶಾನ ಭೂಮಿಗಳ ವಿಶಿಷ್ಟ ಆಕಾರ, ಗಾತ್ರ ಹಾಗೂ ನಿರ್ಮಾಣ ಅಥವಾ ಕೋಟೆಯ ಗೋಡೆಗಳನ್ನು ಹತ್ತಬಹುದಾಗಿದ್ದ ಸ್ಥಳೀಯ ಪಾಳೆಯಗಾರರ ಸೈನ್ಯದ ಶಕ್ತಿ ಸಾಮರ್ಥ್ಯ ಇತ್ಯಾದಿಗಳ ಕುರಿತು) ಆಕರ್ಷಕ ವೀಡಿಯೋ ಮಾಡಿದರು. ಸ್ಥಳಿಯ ಜನರ ಪೀಳಿಗೆಗಳು ಒದಗಿಸಿದ ನಿರೂಪಣೆಗಳಿಗೆ ಗೌರವವನ್ನು ನೀಡುತ್ತಲೇ ಇತಿಹಾಸದಲ್ಲಿ ಪುರಾವೆಗಳ ಪ್ರಾಮುಖ್ಯತೆಯನ್ನು ಅರಿತುಕೊಳ್ಳುವ ಶೈಕ್ಷಣಿಕ ಪಯಣದಲ್ಲಿ ಸಹಜವಾಗಿ ಕಂಡೂ ಕಾಣದಂತೆ ಮಕ್ಕಳ ಜೊತೆಯಾದರು.

ಗ್ರಾಮೀಣ ಭಾರತದಲ್ಲಿನ ಸರ್ಕಾರೀ ಶಾಲೆಗಳು ಹಾಗೂ ಶಿಕ್ಷಕರ ಈ ಕಿರು ವಿವರಗಳನ್ನೆಲ್ಲ ಜೋಡಿಸುತ್ತ ಹೋದಂತೆ, ಸಾರ್ವಜನಿಕ ಶಿಕ್ಷಣದ ಕುರಿತಾದ ಚರ್ಚೆಗೆ ಸಂಬಂಧಿಸಿದಂತೆ ಕೆಲ ಅಂಶಗಳನ್ನು ಕಾಣಬಹುದು. ಒಂದು, ಕಷ್ಟಪಟ್ಟು ಕೆಲಸ ಮಾಡುವ ಬದ್ಧತೆಯನ್ನುಳ್ಳ, ಪ್ರೇರಿತ ಹಾಗೂ ತಮ್ಮ ಕೆಲಸವನ್ನು ಪ್ರೀತಿಸುವ ಶಿಕ್ಷಕರು ಬದಲಾವಣೆ ಅಥವಾ ಸುಧಾರಣೆಯನ್ನು ತರಬಲ್ಲರು. ಎರಡು, ಸ್ವಾಯತ್ತತೆಯನ್ನು ಬಯಸುವ ಶಿಕ್ಷಕರಿಗೆ ಸಾರ್ವಜನಿಕ ಶಾಲೆ ಹಾಗೂ ಪಠ್ಯಕ್ರಮಗಳಲ್ಲಿ ಸಾಕಷ್ಟು ಅವಕಾಶ ಹಾಗೂ ಸ್ವಾಯತ್ತತೆಗಳಿವೆ. ಮೂರು, ತಮ್ಮ ವಿದ್ಯಾರ್ಥಿಗಳಿಗೆ ಅತ್ಯುತ್ತಮವಾದುದನ್ನು ಕೊಡಲು ಬಯಸುವ ಸಮರ್ಥ, ಸೃಜನಶೀಲ ಶಿಕ್ಷಕರಿಗೆ ಸಂಪನ್ಮೂಲ ಹಾಗೂ ಸಾಮಗ್ರಿಗಳು ಎಟುಕಬಲ್ಲವು. ಸಾರ್ವಜನಿಕ ಶಿಕ್ಷಣ ವ್ಯವಸ್ಥೆಯಂತಹ ಬೃಹತ್ ವಿಚಾರವನ್ನು ಚರ್ಚಿಸುವಾಗ, ಇಡೀ ವ್ಯವಸ್ಥೆಯನ್ನು ಅದರ ಅಖಂಡ ಸ್ವರೂಪದಲ್ಲಿ ನೋಡುವ ನೀತಿ ನಿಯಮಗಳ ಅನುಷ್ಠಾನ, ಶೈಕ್ಷಣಿಕ ಮತ್ತು ಆಡಳಿತಾತ್ಮಕ ಸಾಂಸ್ಥಿಕ ಬೆಂಬಲ ಮತ್ತಿತರ ಸಂಗತಿಗಳು ಮತ್ತೆಮತ್ತೆ ಕೇಳಿಬರುತ್ತಲೇ ಇರುತ್ತವೆ. ನಾವು ಮಹತ್ವದ ಅಂಶಗಳನ್ನು ಗುರುತಿಸಲು ಸಂಪೂರ್ಣವಾಗಿ ವಿಫಲರಾಗುತ್ತೇವೆ. ಶಾಲಾ ಹಂತದಲ್ಲಿ, ಎಲ್ಲಾ ಅಡೆತಡೆಗಳನ್ನೂ ಎದುರಿಸುವ ಸರ್ಕಾರೀ ಶಾಲೆಗಳ ಸಾಹಸೀ ಶಿಕ್ಷಕರಿಗೆ, ಇದು ಎರಡು ತರಗತಿ ಕೋಣೆಗಳ, ವಿದ್ಯಾರ್ಥಿಗಳ, ತಮ್ಮ ಮಕ್ಕಳ ವಿದ್ಯಾಭ್ಯಾಸದ ವಿಷಯದಲ್ಲಿ ಅವರ ಮೇಲೆ ನಂಬಿಕೆ ಇಟ್ಟಿರುವ ಸಮುದಾಯದ ಹಾಗೂ ತಮ್ಮದೇ ಆತ್ಮಸಾಕ್ಷಿಯ ಪ್ರಪಂಚ. ಈ ಮಕ್ಕಳು ಬಹುತೇಕವಾಗಿ ಮೊದಲ ಪೀಳಿಗೆಯ ವಿದ್ಯಾರ್ಥಿಗಳು. ಅವರಿಗೆ ಪಾಲಕರ ಬೆಂಬಲ ಇಲ್ಲವೇ ಇಲ್ಲ ಎನ್ನಬಹುದು .ಇದ್ದರೂ ಅಲ್ಪಪ್ರಮಾಣದಲ್ಲಿ ಅಷ್ಟೇ. ಅವರ ಮನೆಗಳಲ್ಲಿ ಓದಲು ಯಾವ ಸಾಮಗ್ರಿಗಳೂ ಸಿಗುವುದಿಲ್ಲ. ಕೆಲ ಮಕ್ಕಳಿಗಂತೂ ಶಾಲೆಯಲ್ಲಿ ಕೊಡುವ ಮಧ್ಯಾಹ್ನದ ಊಟವೇ ಅವರ ದಿನದ

ಏಕೈಕ ಬಿಸಿ ಆಹಾರ.  ಪುಸ್ತಕ, ಸಮವಸ್ತ್ರ ಮತ್ತು ಇತರ ಸಾಮಗ್ರಿಗಳನ್ನು ಸಮಯಕ್ಕೆ ಸರಿಯಾಗಿ ಪಡೆಯಲು ಒದ್ದಾಡುವ ಮತ್ತು ಮಕ್ಕಳೊಂದಿಗೆ ಪ್ರತಿದಿನವೂ ಕೆಲಸ ಮಾಡುವ ಶಿಕ್ಷಕರಿಗೆ, ತಮ್ಮ ಮಕ್ಕಳು ಪ್ರಗತಿಯ ಹಾದಿಯಲ್ಲಿ ಇಡುವ ಅತಿಚಿಕ್ಕ ಹೆಜ್ಜೆಯೂ ದೊಡ್ಡ ಗೆಲುವಾಗಿರುತ್ತದೆ. ಅವರು ಎಲ್ಲೋ ದೂರ ಮೂಲೆಯೊಂದರಲ್ಲಿ ಇರುವ ತಮ್ಮದೇ ಪ್ರಪಂಚದಲ್ಲಿ ಪರಿವರ್ತನೆಯನ್ನು ಸೃಷ್ಟಿಸುತ್ತಿದ್ದಾರೆ. ನಾವು ಹೇಳುವ ವ್ಯವಸ್ಥೆಯ ಸಂಪೂರ್ಣ ಬದಲಾವಣೆಯನ್ನು ಅರ್ಥ ಮಾಡಿಕೊಳ್ಳುವ ಬಯಕೆ ಅವರಲ್ಲಿಲ್ಲ ಅಥವಾ ಅವರು ಅದಕ್ಕೆ ಕಾಯಲು ಬಯಸುವುದೂ ಇಲ್ಲ.